ಆ) ಇದರ ಅಗತ್ಯತೆ ಕಂಡು ಬಂದಿಲ್ಲವೆ? ವಿವರ ನೀಡುವುದು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :

ಆ) ಇಲ್ಲ

ಆ) ಕೋಲಾರ ಗ್ರಾಮದಲ್ಲಿ ಕೇವಲ 5 ಹಣ ತೆಗೆಯುವ ಅಧಿಕಾರಿಗಳು (drawing officers) ಮಾತ್ರ ಇದ್ದು ಇದಕ್ಕಾಗಿ ಪ್ರತ್ಯೇಕ ಉಪ ಖಜಾನೆ ತೆರೆಯುವ ಅವಶ್ಯಕತೆ ಕಂಡು ಬರುವುದಿಲ್ಲ.

ರಾಜ್ಯ ಬೊಕ್ಕಸಕ್ಕೆ ಅಬ್ಕಾರಿ ಬಾಬ್ತಿನಿಂದ ಬಂದಿರುವ ಆದಾಯ

1314 (1745) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಬಕಾರಿ ಬಾಬ್ತಿನಿಂದ ರಾಜ್ಯಕ್ಕೆ ಬೊಕ್ಕಸಕ್ಕೆ ಬರುವ ಆದಾಯವೆಷ್ಟು? (ಕಳೆದ ಮೂರು ವರ್ಷಗಳ ವಿವರಗಳನ್ನು ವರ್ಷವಾರು ನೀಡುವುದು)

ಆ) ಬಿಜಾಪುರ ಜಿಲ್ಲೆಯ ಅಬಕಾರಿ ಬಾಬ್ತಿನಿಂದ ಎಷ್ಟು ಆದಾಯ ನಿರೀಕ್ಷಿಸಲಾಗುತ್ತಿದೆ; ಎಷ್ಟು ಬರುತ್ತಿದೆ? (3 ವರ್ಷಗಳ ವಿವರಗಳನ್ನು ವರ್ಷವಾರು ನೀಡುವುದು)

ಇ) ಬಿಜಾಪುರ ಜಿಲ್ಲೆಯಲ್ಲಿ ಅಬಕಾರಿ ಹರಾಜನ್ನು ಪಡೆದಿರುವವರು ಯಾರು; ಎಷ್ಟು ಮೊತ್ತಕ್ಕೆ ಪಡೆಯಲಾಗಿದೆ?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ)

ವರ್ಷ	ಆದಾಯ (ಕೋಟಿ ರೂ.ಗಳಲ್ಲಿ)
1999-2000	1233.55
2000-2001	1550.23
2001-2002	2004.11

ಆ)

ವರ್ಷ	ನಿರೀಕ್ಷಣೆ	ಆದಾಯ (ಕೋಟಿ ರೂ.ಗಳಲ್ಲಿ)
1999-2000	10.70	19.67
2000-2001	20.44	23.23
2001-2002	24.39	29.11

ಇ)

ತಾಲ್ಲೂಕು	ಗುತ್ತಿಗೆದಾರರ ಹೆಸರು	ಮೊತ್ತ (ಮಾಹೆಯಾನ)
ಬಿಜಾಪುರ	ಶ್ರೀ ಎನ್.ಶ್ರೀನಿವಾಸಲು	36,00,000
ಬಿ.ಬಾಗೇವಾಡಿ	ಶ್ರೀ ಎನ್. ಶ್ರೀನಿವಾಸಲು	13,00,000
ಇಂಡಿ	ಶ್ರೀ ಶ್ರೀಮಂತ್ ಎನ್. ಗುತ್ತೇದಾರ್	30,60,000
ಸಿಂದಗಿ	ಶ್ರೀ ಶ್ರೀಮಂತ್ ಎನ್. ಗುತ್ತೇದಾರ್	19,50,000
ಮುದ್ದೇಬಿಹಾಳ್	ಶ್ರೀ ಪ್ರವೀಣ್ ಎಸ್. ಗುತ್ತೇದಾರ್	17,25,000